# ಎಲ್ಲರಿಗೂ ಬೇಕಾದ 'ಹಸಿರಿನ ಕಟ್ಟು'

**ಉತ್ತರ** ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ತಮ್ಮಣ್ಣ ಬೀಗಾರ, ಮಕ್ಕಳ ಮಾತನ್ನು ಅರಿತ ಕವಿ. ಮಕ್ಕಳಿಗಾಗಿ ಕಥೆ-ಕಾದಂಬರಿಯನ್ನೂ ಬೀಗಾರರೂ ಬರೆದಿದ್ದಾರಾದರೂ, ಅವರು ಹೆಚ್ಚಿನ ಯಶಸ್ಸು ಕಂಡಿರುವುದು ಕವಿಯಾಗಿಯೇ. 'ಗುಬ್ಬಚ್ಚಿ ಗೂಡು', 'ಖುಷಿಯ ಬೀಜ', 'ಹಾಡಿನ ಹಕ್ಕಿ', ಪುಟಾಣಿ ಪುಡಿಕೆ', 'ಸೊನ್ನೆ ರಾಶಿ ಸೊನ್ನೆ', 'ತೆರೆಯಿರಿ ಕಣ್ಣು ಖುಷಿಯ ಬೀಜ' ಹಾಗೂ 'ಹಾಡಿನ ಹಕ್ಕಿ' ಅವರ ಕೆಲವು ಕವನ ಸಂಕಲನಗಳು. 'ಹಸಿರಿನ ಕಟ್ಟು' – ಮೂವತ್ತಾರು ಪದ್ಯಗಳ ಇತ್ತೀಚಿನ ಸಂಕಲನ.

ಜಗತ್ತಿನ ಎಲ್ಲ ಸುಂದರ ಸಂಗತಿಗಳು ಹಾಗೂ ಸೃಜನಶೀಲ ಕ್ರಿಯೆಗಳಲ್ಲಿ 'ಮಗುತನ'ದ ಇರುವನ್ನು ಕಾಣುವುದು ಹಾಗೂ ಹಸಿರಿನೊಂದಿಗೆ ನಮ್ಮ ಉಸಿರು ತಳುಕು ಹಾಕಿಕೊಂಡಿರುವುದನ್ನು ನೆನಪಿಸುವ ಕೆಲಸ ಈ ಸಂಕಲನದ ಕವಿತೆಗಳ ಮುಖ್ಯ ಉದ್ದೇಶವಿರುವಂತಿದೆ. ಈ ಆಶಯ ಸಂಕಲನದ ಮೊದಲ ಕವಿತೆ 'ಓಗುಡುತಿತ್ತು...'ವಿನಲ್ಲಿಯೇ ಸ್ಪಷ್ಟವಾಗಿ ಗಮನಕ್ಕೆ ಬರುತ್ತದೆ. ಕವಿ, ವಿಶ್ವದ ಎಲ್ಲೆಡೆಯೂ ಮಗುವನ್ನು ಕಾಣಿಸುತ್ತಾರೆ. ಮಣ್ಣಿನ ಒಳಗೆ, ಮರದ ಒಳಗೆ, ಮೋಡದೊಳಗೆ, ತನೆ ಕಾಳಿನಲಿ – ಮಗುವಿಲ್ಲದ ತಾವು ಯಾವುದು? ಈ ಮಗುತನವೇ ಜಗತ್ತನ್ನು ಮಾನವೀಯಗೊಳಿಸಿರುವುದು. 'ಎಲ್ಲರ ಹೃದಯದಿ ಮಗುವೊಂದಿತ್ತು, ಮಕ್ಕಳ ಪ್ರೀತಿಗೆ ಓಗುಡುತಿತ್ತು' ಎನ್ನುವ ಪದ್ಯದ ಕೊನೆಯ ಸಾಲು, ಜೀವಗೋಳವನ್ನು ಜೀವಂತವಾಗಿರಿಸಿರುವ ಶಕ್ತಿ ಯಾವುದು ಎನ್ನುವುದನ್ನು ಸೂಚಿಸುವಂತಿದೆ.

'ಹಕ್ಕಿಯ ಮರಿಗಳ ಪ್ರೀತಿಯನೆಲ್ಲ ತುಂಬಿವೆ ಮರಗಳು ಹಣ್ಣಲ್ಲಿ, ಹಣ್ಣನ್ನು ತಿನ್ನುವ ಮಕ್ಕಳ ಪ್ರೀತಿ ಹರಡಲಿ ಎಲ್ಲೆಡೆ ಖುಷಿಯಲ್ಲಿ' ('ಹರಡಲಿ ಖುಷಿ') ಎನ್ನುವ ಸಾಲುಗಳಲ್ಲಿ, ಪ್ರಕೃತಿ ಮತ್ತು ಮಗುತನ ಒಂದೇ ಆಗಿರುವ ಸೋಜಿಗವಿದೆ.

'ಹಸಿರಿನ ಕಟ್ಟು' ಎನ್ನುವ ಕವಿತೆ ಸಂಕಲನದ ಶೀರ್ಷಿಕೆಯೂ ಆಗಿದೆ. ಈ ಕವಿತೆ, ನೀರಿನ ಆಟದೊಂದಿಗೆ ಹಸಿರಿನ ಪಾಠವನ್ನು ಕಲಿಯಿರಿ ಎನ್ನುತ್ತ, ಗಿಡಗಳನ್ನು ನೆಡಲು ಚಿಣ್ಣರನ್ನು ಒಲಿಸುವಂತಿದೆ. ಹಸಿರುಪ್ರೀತಿಯ ಈ ಆಶಯ ಸಂಕಲನದ ಬಹುತೇಕ ಪದ್ಯಗಳನ್ನು ರೂಪಿಸಿದೆ. ಈ ಕವಿತೆಗಳು ಪ್ರಕೃತಿಯ ಬಗ್ಗೆ ಮಕ್ಕಳಲ್ಲಿ ತಿಳಿವಳಿಕೆ ಮೂಡಿಸುವುದರ ಜೊತೆಗೆ, ಪರಿಸರಪ್ರೇಮವನ್ನೂ ಮೂಡಿಸುವಂತಿವೆ. 'ಗೊಬ್ಬರ ಮಣ್ಣಿಗೆ ಬೇರಿನ ಮುತ್ತು, ಮಣ್ಣಲಿ ಬೆರೆತಿದೆ ಪ್ರೀತಿಯ ತುತ್ತು' ಎನ್ನುವ 'ಕೊಡುಗೆ' ಪದ್ಯ ಕೊನೆಗೊಳ್ಳುವುದು, 'ಗಿಡಗಳು ಮಾಡುವ ಪಿಷ್ಟದ ಅಡಿಗೆ, ಎಲ್ಲರಿಗಾಯಿತು ಪ್ರೀತಿಯ ಕೊಡುಗೆ' ಎನ್ನುವ ತಿಳಿವಳಿಕೆಯೊಂದಿಗೆ. ಈ ಕವಿತೆಯ ಜೊತೆಗೇ ಓದಿಕೊಳ್ಳಬಹುದಾದ ಪದ್ಯ 'ಪ್ರೀತಿಯ ಅಡುಗೆ'ಯೂ ಪ್ರಕೃತಿಯ ತಾಯಿಪ್ರೀತಿ–ಸಾಮರ್ಥ್ಯವನ್ನು ಬೆರಗಿನಿಂದ ಕಂಡಿದೆ. ಮರದ ಅನಂತ ಸಾಧ್ಯತೆಗಳನ್ನು ಹೊಳೆಯಿಸುವ 'ಪದ್ಯದ ಮರ' ಕವಿತೆ, ಹಸುರು ಮರದ ಪ್ರತಿ ಭಾಗವೂ ಕಾವ್ಯವಾಗಿರುವುದನ್ನು ಹಾಗೂ ಆ ಕಾವ್ಯ ನಮ್ಮ ಬದುಕಿಗೆ ಅಗತ್ಯವಾಗಿರುವುದನ್ನು ಕಾಣಿಸುವಂತಿದೆ. ಪ್ರಕೃತಿ ಹಾಗೂ ಮನುಷ್ಯಪ್ರಕೃತಿಯ ನಡುವೆ ಅಭೇದ ಕಲ್ಪಿಸುವ ಈ ಪದ್ಯ, ಬದುಕೊಂದು ಜೀವಂತ ಕಾವ್ಯ ಎನ್ನುವುದನ್ನು ನೆನಪಿಸುವಂತಿದೆ. ಮರ ಹಾಗೂ ಪದ್ಯ ಎರಡೂ ಭಿನ್ನವಲ್ಲ ಎನ್ನುವ ತಿಳಿವಳಿಕೆ ಇಲ್ಲಿದೆ; ಲೋಕ